# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ

ಎ.ವಿಲೇ.ನಂ.ಕಂ.ಪಹಣಿ.ಅಪೀಲು:208/2012-13 ದಿನಾಂಕ:07.06.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ**

**ವಾದಿಗಳು: ಶ್ರೀ/ ಶ್ರೀಮತಿ**

1. ಮಲ್ಲೇಶಪ್ಪ ತಂದೆ ಪಕ್ಕೀರಪ್ಪ,
   ವಾಸ: ಸಕ್ರಳ್ಳಿ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು, ಬಳ್ಳಾರಿ ಜಿಲ್ಲೆ.

**[ಶ್ರೀ ಹೆಚ್.ಉಮೇಶ್, ವಕೀಲರು, ಹೊಸಪೇಟೆ ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ಎ.ಭರ್ಮಪ್ಪ ತಂದೆ ದಿ॥ ಭೀಮಪ್ಪ,
   ವಾಸ: ಸಕ್ರಳ್ಳಿ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು, ಬಳ್ಳಾರಿ ಜಿಲ್ಲೆ.
2. ಹುಡೇದ್ ಕರಿಬಸಪ್ಪ ತಂದೆ ದಿ॥ ಗೋಣಿ ಬಸಪ್ಪ
   ವಾಸ: ಹರೇಗೊಂಡನಹಳ್ಳಿ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು, ಬಳ್ಳಾರಿ ಜಿಲ್ಲೆ.
   **[ಶ್ರೀ ಜಂಬಣ್ಣ.ಕೆ. ವಕೀಲರು, ಹೊಸಪೇಟೆ ]**
3. ಕಂದಾಯ ನಿರೀಕ್ಷಕರು, ಹಂಪಸಾಗರ.

********

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಗರಿಬೊಮ್ಮನಹಳ್ಳಿ | ಹಂಪಸಾಗರ | ಸೊನ್ನ | 356 | 04 ಎಕರೆ 40 ಸೆಂಟ್ಸ್ |

**ಪೀಠಿಕೆ:**

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಸೊನ್ನ ಗ್ರಾಮದ ಸ.ನಂ.356 ವಿಸ್ತೀರ್ಣ:04 ಎಕರೆ 40 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಹಂಪಸಾಗರ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:34/2002-03 ದಿನಾಂಕ:15.05.2003 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ಮೇಲ್ಮನವಿಯನ್ನು ಮತ್ತು ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಲು ಕೋರಿ ಕಾಲಮಿತಿ ಕಾಯ್ದೆಯ ಕಲಂ 5 ರಡಿಯಲ್ಲಿ ಮನವಿಯನ್ನು ವಾದಿಪರ ವಕೀಲರು ದಿನಾಂಕ:02.01.2013 ರಂದು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ಅಪೀಲು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:12.03.2013 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಆದರೆ, ವಿಚಾರಣೆ ಪ್ರಾರಂಭಿಸಿದಾಗಿನಿಂದ ಉಭಯ ಪಕ್ಷಗಾರರು ಸತತವಾಗಿ ಗೈರುಹಾಜರಾಗಿದ್ದು, ಪ್ರಕರಣದಲ್ಲಿ ಆಸಕ್ತಿ ಇಲ್ಲದೇ ಇರುವುದು ಕಂಡುಬಂದಿರುತ್ತದೆ. ಆದುದರಿಂದ, ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಈ ಕೆಳಕಂಡಂತೆ

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಉಭಯ ಪಕ್ಷಗಾರರು ಸತತವಾಗಿ ಗೈರುಹಾಜರಾಗಿರುವುದರಿಂದ, ಸದರಿ ಅಪೀಲನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲಾಗಿದೆ. (dismissed for default).

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:07.06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ತಯಾರಿಸಿದ್ದು : 14/6/16
ದಿನಾಂಕ :
ದಿನಾಂಕ :

[ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ

**ಪ್ರತಿಯನ್ನು:** ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.